ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಎಷ್ಟು ಹೆಣ್ಣು ಮಕ್ಕಳಿಂದ applications ಬಂದಿವೆ?

*Sri A. G. RAMACHANDRA RAO.—I want notice.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಹನ್ನೊಂದು ಜನ ಹೆಂಗನರು ಪಾಶ್ಚಾತ್ಯ ದೇಶಗಳಿಗೆ ಹೆಚ್ಚಿನ ವ್ಯಾಸಂಗ ಪಡೆಯಲು ಹೋಗಿದ್ದಾರೆ ಎಂದು ಉತ್ತರ ಕೊಟ್ಟಿದ್ದೀರಿ. ಇದರ ಬಗ್ಗೆ ಬಂದ Applications ಎಷ್ಟು?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ವಿಚಾರಮಾಡಿ ಹೇಳುತ್ತೇನೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಹೆಣ್ಣುಮಕ್ಕಳ ಸಂಖ್ಯೆ ತಾವು ಕೊಟ್ಟಿರುವುದು ಕಡಮೆ ಅಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಕಡಿಮೆ ಎಂದು ಹೇಳುವುದು ಕಷ್ಟ. ಅವರಿಗೆ ಅನುಕೂಲವಾಗಿರತಕ್ಕಂಥ studies ಎಷ್ಟು ಇವೆಯೋ ಅವನ್ನು ಸಾಮಾನ್ಯವಾಗಿ ಅವರಿಗೆ ಕೊಡಬೇಕೆಂಬ ದೃಷ್ಟಿಯಿಂದ ಪರಿಶೀಲನೆ ಮಾಡಿ ಕೊಟ್ಟಿರುವುದು.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಅರ್ಜಿಗಳು ಹೆಚ್ಚು ಬಂದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಹನ್ನೊಂದಕ್ಕಿಂತ ಜಾಸ್ತಿ ಇರಬಹುದು.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಹೆಣ್ಣುಮಕ್ಕಳಿಗೆ ಪ್ರಾಶಸ್ತ್ಯ ಕೊಡಬೇಕೆಂಬ ಉದ್ದೇಶ ತಮಗೆ ಇದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಸ್ವಲ್ಪ ಹೆಚ್ಚಿಗೆ ಮಾಡಿದರೆ ಚೆನ್ನಾಗಿತ್ತು ಅಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾವು ಹೆಚ್ಚಿಗೆ ಮಾಡುವ ಪ್ರಶ್ನೆಯಲ್ಲ. ಅವರು ಹೆಚ್ಚಾಗಿ ಮುಂದೆ ಬಂದರೆ ಅವಕಾಶವಿದ್ದಹಾಗೆಲ್ಲಾ ಕೊಡುತ್ತೇವೆ.

ಶ್ರೀ ವಿ. ಆರ್. ನಾಯ್ಡು.—ಸರ್ಕಾರದವರು ಪಾಶ್ಚಾತ್ಯ ದೇಶಗಳಿಗೆ ಹೆಣ್ಣುಮಕ್ಕಳನ್ನೂ ಗಂಡುಮಕ್ಕಳನ್ನೂ ಸರ್ಕಾರದ ಹಣ ಖರ್ಚುಮಾಡಿತಾನೇ ಕಳುಹಿಸಿಕೊಡುತ್ತಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರ ಹಣ ಖರ್ಚುಮಾಡಿ ಪಾಶ್ಚಾತ್ಯ ದೇಶದ University foundationsನಿಂದ ಹಣದ ಅವಕಾಶ ಮಾಡಿಕೊಟ್ಟು ಅವರನ್ನು ಕಳುಹಿಸಿಕೊಡುತ್ತೇವೆ.

ಶ್ರೀ ವಿ. ಆರ್. ನಾಯ್ಡು.—ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳು ಅಲ್ಲಯೇ ಉಳಿದುಕೊಂಡರೆ ನಮಗೇನು ಬಂತು!

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ ಏನು ಮಾಡಲೂ ನಮ್ಮ ಕೈಯಲ್ಲ ಏನೂ ಇಲ್ಲ.

Dasara Exhibition Accounts.

Q.—476. Sri V. R. NAIDU (Malleswaram).—

Will the Government be pleased to state:—

(*a*) the income derived by the Dasara Exhibition conducted during the Dasara Festivities of 1950, 1951, 1952, 1953 and 1954;

(*b*) since how many years the accounts and records connected therewith have not been audited?

A.—Sri A. G. RAMACHANDRA RAO (Minister for Law and Education).—

(*a*) Please see the statement below:—

Statement showing the Income and Expenditure of the Dasara Exhibition 1950, 1951, 1952, 1953 and 1954.

Exhibition		*Income*		
		Rs.	a.	p.
1950	...	1,11,025	15	0
1951	...	1,19,794	9	6
1952	...	1,23,575	10	9
1953	...	1,17,567	14	3
1954	...	1,38,597	0	0

(*b*) The accounts of the Exhibition 1954 are to be audited. Accounts of the previous years have been audited.

ಶ್ರೀ ವಿ. ಆರ್. ನಾಯ್ಡು.—ದಸರಾ ವಸ್ತುಪ್ರದರ್ಶನಗಳಿಗೆ ಎಷ್ಟು ಜನ ಭೇಟಿಕೊಟ್ಟ ಹಾಗಾಯಿತು, ತಿಳಿಸುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ವಿಚಾರಮಾಡಿ ಹೇಳುತ್ತೇನೆ.

ಶ್ರೀ ವಿ. ಆರ್. ನಾಯ್ಡು.—ಕಷ್ಟಪಟ್ಟು ಕೇಳುತ್ತಾ ಇರುತ್ತೇವೆ. ಇಲ್ಲಿ ಕೊಟ್ಟರೆ ಮೇಲು.

ಶ್ರೀ ಎ. ಜಿ. ರಾಮಚಂದ್ರರಾವ್.—ತಾವು ಕೇಳಿರುವುದು ಎಷ್ಟು ವರಮಾನ ಬಂತು ಎಂದು ಮಾತ್ರ. ಎಷ್ಟು ಜನ Exhibitionಗೆ ಬಂದಿದ್ದರು ಎಂಬುದನ್ನು ಊಹೆಮಾಡಿ ಹೇಳಿದರೆ ತಪ್ಪಾಗುತ್ತದೆ.

ಶ್ರೀ ವಿ. ಆರ್. ನಾಯ್ಡು.—ವರಮಾನ ಇಷ್ಟೇ ಬಂತೆಂದು ಹೇಳಿದ್ದೀರಿ. ಆದರೆ ಖರ್ಚು ಎಷ್ಟಾಗಿದೆ ಎಂದು ತೋರಿಸಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾವ್.—ನೀವು ಕೇಳಿಲ್ಲ, ನಾವು ಕೊಟ್ಟಿಲ್ಲ.

ಶ್ರೀ ವಿ. ಆರ್. ನಾಯ್ಡು.—ಖರ್ಚು ಎಷ್ಟಾಗಿದೆ ಎಂದು ಹೇಳಿಬಿಟ್ಟರೆ ಒಳ್ಳೆಯದು.

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಸಮಾಚಾರವನ್ನು ತರಿಸಿ ಹೇಳಬೇಕು.

ಶ್ರೀ ವಿ. ಆರ್. ನಾಯ್ಡು.—ಸರ್ಕಾರದವರು ದಸರಾ ವಸ್ತುಪ್ರದರ್ಶನವನ್ನು ಏತಕ್ಕೋಸ್ಕರ ವರ್ಷೇ ವರ್ಷೇ ಮಾಡುತ್ತಾ ಇರುವುದು?

ಶ್ರೀ ಎ. ಜಿ. ರಾಮಚಂದ್ರರಾವ್.—ಜನರಿಗೆ ಹೆಚ್ಚಿಗೆ ತಿಳಿವಳಿಕೆ ಬರಲಿ ಮತ್ತು ಆ ತಿಳಿವಳಿಕೆಯ ಮೂಲಕ ಉತ್ಪತ್ತಿ ಜಾಸ್ತಿ ಆಗಲಿ ಎಂಬುದೇ ಉದ್ದೇಶ.

ಶ್ರೀ ವಿ. ಆರ್. ನಾಯ್ಡು.—ಮುಖ್ಯ ಮಂತ್ರಿಗಳು ಹಿಂದೆ ಜಾಗವನ್ನು acquire ಮಾಡಿಕೊಂಡು ದಸರಾ ವಸ್ತುಪ್ರದರ್ಶನವನ್ನು ದೊಡ್ಡದು ಮಾಡುತ್ತಾರೆಂದು ಹೇಳಿದ್ದಾರೆ. ಅದನ್ನು ಯಾವಾಗ ಸರ್ಕಾರದವರು ಕಾರ್ಯಗತ ಮಾಡುತ್ತಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

Sri D. VENKATESH.—To answer (*a*) a statement showing the income and expenditure of Dasara Exhibition has

(SRI D. VENKATESH.)

been furnished ; but in the statement I find that expenditure has not been mentioned.

Sri A. G. RAMACHANDRA RAO.—Because the question itself pertains to income derived from the Exhibition. Therefore we restricted the answer to income only.

Sri D. VENKATESH.—Is there on necessity for the expenditure being mentioned there in the answer ?

Sri A. G. RAMACHANDRA RAO.—It is not necessary.

Sri K. PUTTASWAMY.—Does that represent gross income or the net income, Sir ?

Sri A. G. RAMACHANDRA RAO.—It represents the gross income.

ಶ್ರೀ ಕೆ. ಪುಟ್ಟಸ್ವಾಮಿ.—ಇದರಲ್ಲಿ ಖರ್ಚು ಕಳೆದು ಏನಾದರೂ ಉಳಿಯುತ್ತದೆಯೇ? ಎಷ್ಟು ಉಳಿಯುತ್ತದೆಂದು ಹೇಳುತ್ತೀರಾ?

ಶ್ರೀ ಎ ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಕೆ. ಪುಟ್ಟಸ್ವಾಮಿ.—ಅದನ್ನು ವರ್ಷೇ ವರ್ಷೇ Local Auditಗೆ ಒಳಪಡಿಸಲಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಚೆಗೆ ಆಗುತ್ತಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಎಷ್ಟು ವರ್ಷಗಳಿಂದ ಆಗುತ್ತಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೂರು ವರ್ಷಗಳಿಂದ pursue ಮಾಡುತ್ತಿದ್ದೇವೆ. ಹಿಂದಿನ ರೆಕ್ಕಗಳು up-to-date ಆಗಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಆಡಿಟ್ ಆಗಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—1952-53 ನೆಯ ಇಸವಿಯದು ಆಡಿಟ್ ಆಗಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಈ ವರ್ಷದ ಉತ್ಪನ್ನ ಏನು, ಖರ್ಚು ಜಾಸ್ತಿಯೇ ಎಂದು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ತರಿಸಿ ಹೇಳುತ್ತೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇದರ ಆಡಿಟ್ ವರದಿಯನ್ನು ಸಭೆಯ ಮುಂದಿಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬೇಕು ಎಂದರೆ ಇಡುತ್ತೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇಡಬೇಕು ಎಂದು ಕೋರುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಇಡುತ್ತೇನೆ.

Sri M. LINGANNA.—May I know the officer responsible to keep all these accounts ?

Sri A. G. RAMACHANDRA RAO.—There is a Managing Committee and the Chairman of the Managing Committee is appointed by the Government and it is their responsibility for the proper maintenance of the accounts.

Sri M. LINGANNA.—Is it the Chairman of the Committee or one of the officials who is acting as Under Secretary that is responsible to maintain the accounts ?

Sri A. G. RAMACHANDRA RAO.—The Managing Committee is responsible to run the show and also to maintain the accounts.

Sri M. LINGANNA.—Who is the custodian of the accounts of that particular committee ?

Sri A. G. RAMACHANDRA RAO.—There is a Secretary who will maintain the accounts.

Sri M. LINGANNA.—Is it the opinion of Government that all the members are jointly responsible or has one official been entrusted with this duty ?

Sri A. G. RAMACHANDRA RAO.—The Secretary is responsible; the Managing Committee supervise and see that it is done properly.

Sri M. LINGANNA.—If there is any shortcomings in the accounts who is held responsible, whether the Secretary or the Committee ?

Sri A. G. RAMACHANDRA RAO.—It is a hypothetical question, Sir. It is of the man who is entrusted with the responsibility of accounting.

Sri M. LINGANNA.—Has it come to the notice of Government that accounts, as and when they are ready, are not submitted in time and there is a lot of delay ?

Sri A. G. RAMACHANDRA RAO.—Government is not aware of it.

ಶ್ರೀ ಟಿ. ಸಿ. ಬಸಪ್ಪ.—ಕೊನೆಯ ಪಕ್ಷ 1950 ನೆಯ ಇಸವಿಯಿಂದ ಎಷ್ಟು ಖರ್ಚಾಗಿದೆಯೆಂದು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೇಳುವುದಕ್ಕೆ ಸಾಧ್ಯ ; ಆದರೆ ಈಗ ಆಗುವುದಿಲ್ಲ.

ಶ್ರೀ ಟಿ. ಸಿ. ಬಸಪ್ಪ.—1953-54 ನೆಯ ಇಸವಿಗೆ ಎಷ್ಟಾಗಿದೆಯೆಂದು ಹೇಳುತ್ತೀರಾ ?

ಶ್ರೀ ಎ ಜಿ. ರಾಮಚಂದ್ರರಾವ್.—ತರಿಸಿಕೊಡಬೇಕು.

ಶ್ರೀ ಟಿ. ಸಿ. ಬಸಪ್ಪ.—ಈ ಆಡಿಟ್ಟನ್ನು ಮಾಡುವುದು ಸರ್ಕಾರದ ಅಕೌಂಟೆಂಟ್‌ಗಳೇ ಅಥವಾ ಸರ್ಟಿಫೈಡ್ ಆಡಿಟರುಗಳೇ ?

Sri A. G. RAMACHANDRA RAO.—It will be done under the State Audit.

ಶ್ರೀ ಎಂ. ಚಿಕ್ಕಲಿಂಗಯ್ಯ.—ತಾವು ಸೆಕ್ರೆಟರಿಗಳು ಜವಾಬ್ದಾರರೆಂದು ಹೇಳಿದಿರಿ. ಅಲ್ಲಿ 3 ಜನ ಸೆಕ್ರೆಟರಿಗಳಿದ್ದಾರಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—Official ಸೆಕ್ರೆಟರಿಗಳು, Non-official ಸೆಕ್ರೆಟರಿಗಳು ಇದ್ದಾರಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅವರಲ್ಲಿ ಯಾರು ಜವಾಬ್ದಾರರು ?

ಶ್ರೀ ಎ. ಜಿ. ರಾಮಚಂದ್ರರಾವ್.—Official ಸೆಕ್ರೆಟರಿಯವರು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಿಂದೆ ಒಬ್ಬರೇ ಸೆಕ್ರೆಟರಿಯವರಿದ್ದುದು ಜ್ಞಾಪಕವಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಮೂರು ಜನರನ್ನೇಕೆ ಮಾಡಿದ್ದೀರಿ ?

Sri A. G. RAMACHANDRA RAO.—For the more efficient management of the Exhibition.

ಶ್ರೀ ಎಂ. ಚಿಕ್ಕಲಿಂಗಯ್ಯ.—ಕೆಲಸ ಇಲ್ಲದಿರುವುದರಿಂದ ಕೆಲಸ ಕೊಡಿಸುವುದಕ್ಕಾಗಿ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲಸ ಹೆಚ್ಚಾಗಿದೆಯೆಂದು ಮಾಡಿದ್ದೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಯಾವ ವಿಷಯದಲ್ಲಿ ಕೆಲಸ ಹೆಚ್ಚಾಗಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾನು ಮೊದಲೇ ಹೇಳಿದ ಹಾಗೆ, ಅಕೌಂಟ್ಸ್ ಬಾರದೆ ಇದ್ದುದರಿಂದ ಹೆಚ್ಚಿಗೆ ಪ್ರಯತ್ನಪಟ್ಟು ತರಿಸಬೇಕಾಗಿತ್ತು. ಇದರಿಂದಲೇ ಗೊತ್ತಾಗುತ್ತದೆ, ಕೆಲಸ ಜಾಸ್ತಿಯಾಗಿದೆ ಎಂದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅಲ್ಲಿ Official ಸೆಕ್ರೆಟರಿಗಳಿಗೂ, Non-official ಸೆಕ್ರೆಟರಿಗಳಿಗೂ ಆಡಳಿತ ವಿಷಯದಲ್ಲಿ ಜಿಜ್ಞಾಸೆಯುಂಟಾಗಿ confusion ನ್ನಿಗೆ ಅವಕಾಶವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಎಕ್ಸಿಕ್ಯೂಟಿವ್ ಕಮಿಟಿಯ ಚೇರ್ಮನ್ನರು ಯಾರು ?

Sri A. G. RAMACHANDRA RAO.—The concerned Minister is the Chairman.

Sri Mulka GOVINDA REDDY.—Are the Government aware that an exhibition on similar lines is being held in Bangalore every year ?

Sri A. G. RAMACHANDRA RAO.—I do not know whether it is on similar lines, but an exhibition is being held.

Sri Mulka GOVINDA REDDY.—May I know who is conducting the exhibition, Sir ?

Mr. SPEAKER.—We are not concerned with the Bangalore Exhibition.

ಶ್ರೀ ಪಿ. ಆರ್. ರಾಮಯ್ಯ.—ಈಗ ನಷ್ಟವಾಗುತ್ತಿದೆ ಅಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ ; ಈಚೆಗೆ ನಷ್ಟವಾಗುತ್ತಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಎಷ್ಟು ವರ್ಷಗಳಿಂದ ನಷ್ಟವಾಗುತ್ತಿಲ್ಲ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನಗೆ ಗೊತ್ತಿರುವ ಹಾಗೆ ಎರಡು ಮೂರು ವರ್ಷಗಳಿಂದ ನಷ್ಟವಾಗುತ್ತಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಈ Expenditure ನ್ನು ಮೈಸೂರು ಸಿಟಿ ಮುನಿಸಿಪಾಲಿಟಿಗೆ ಹಾಕಬೇಕೆಂದು ಸರ್ಕಾರದವರ ಆಲೋಚನೆಯಲ್ಲಿತ್ತೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಎಸ್. ಸಿದ್ದಪ್ಪ.—ಈ ವಸ್ತು ಪ್ರದರ್ಶನದ ಮೆಂಬರುಗಳನ್ನು ನೇಮಿಸುವುದು ವರ್ಷ ವರ್ಷವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೂರು ವರ್ಷಕ್ಕೊಂದು ಸಾರಿ.

ಶ್ರೀ ಎಸ್. ಸಿದ್ದಪ್ಪ.—ಅದರಲ್ಲಿ ಯಾವ ನೀತಿಯನ್ನನುಸರಿಸುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಗ್ಸಿಬಿಷನ್ನಿನ ಅವಶ್ಯಕತೆ ಮತ್ತು ಸದಸ್ಯರ ಯೋಗ್ಯತೆಗಳನ್ನು ನೋಡಿ ನೇಮಿಸುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಯೋಗ್ಯತೆಯೆಂದರೆ ಅರ್ಥವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲಸವನ್ನು ನಿರ್ವಹಿಸುವ ಶಕ್ತಿ.

Panchayet Elections in Honnudike Village.

Q.—512. **Sri T. N. MUDALAGIRI GOWDA** (Kunigal).—

Will the Government be pleased to state :—

(*a*) when the Panchayet election took place in Honnudike Village, Tumkur Taluk ;

(*b*) whether the D.S.P. had gone there on the day of the election ; if so, why ;

(*c*) the Sub-Inspector who was there on that day ;

(*d*) whether it is a fact that the police failed to give assistance to women to come and cast their votes freely ;

(*e*) the number of women voters and the number who have cast their votes ?

A.—**Sri H. SIDDAVEERAPPA** (Minister for Home and Industries).—

(*a*) 21st January 1955.

(*b*) Yes. As his presence was necessary for maintaining law and order in the village.

(*c*) Sri T. L. Gurulingiah, Sub-Inspector, Hebbur Range Police Station.

(*d*) No.

(*e*) (i) Number of women voters—293.

(ii) Number who have cast their votes—Information is not available as the boxes are under seal.